ಚೆನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೊಳಿಸುವ ಬಗ್ಗೆ

506. ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಚೆನ್ನಪ್ಪರೆಡ್ಡಿ ಆಯೋಗವು ಎಂದು ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿತು.

ಆ) ಸರ್ಕಾರವು ಈ ವರದಿಯನ್ನು ಪೂರ್ಣವಾಗಿ ಅಭ್ಯಸಿಸಿದೆಯೇ?

ಇ) ಹಾಗಿದ್ದಲ್ಲಿ, ಎಂದಿನಿಂದ ಈ ವರದಿಯನ್ನು ಜಾರಿಗೆ ತರಲಾಗುವುದು?

ಈ) ಈ ವರದಿಯನ್ನು ಜಾರಿಗೆ ತಂದರೆ ಎಷ್ಟು ಹಿಂದುಳಿದ ವರ್ಗದ ಜನರಿಗೆ ಇದರಿಂದ ಅನುಕೂಲವಾಗುತ್ತದೆ?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ನ್ಯಾಯಮೂರ್ತಿ ಚೆನ್ನಪ್ಪರೆಡ್ಡಿಯವರ ಆಯೋಗವು ದಿನಾಂಕ : 7–4–1990ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಆ) ನ್ಯಾಯಮೂರ್ತಿ ಚೆನ್ನಪ್ಪರೆಡ್ಡಿಯವರ ವರದಿಯು ಸರ್ಕಾರದ ಪರಿಶೀಲನಾ ಹಂತದಲ್ಲಿರುತ್ತದೆ.

ಇ) ಸಚಿವ ಸಂಪುಟದ ಉಪ ಸಮಿತಿಯ ವರದಿ ಬಂದ ನಂತರ ಪರಿಶೀಲಿಸಲಾಗುವುದು.

ಈ) ಈ ವರದಿಯನ್ನು ಜಾರಿಗೆ ತಂದರೆ ವರ್ಗ–1ರಲ್ಲಿ 52 ಜಾತಿ ಮತ್ತು ಅದರ ಉಪ ಜಾತಿಯವರಿಗೆ, ವರ್ಗ–2ರಲ್ಲಿ 14 ಜಾತಿ ಮತ್ತು ಅದರ ಉಪ ಜಾತಿಯವರಿಗೆ ಮತ್ತು ವರ್ಗ–3ರಲ್ಲಿ ಕೃಷಿ ಕಾರ್ಮಿಕರು, ವೃತ್ತಿ ನಿರತ ಕಾರ್ಮಿಕರು, ವ್ಯಾಪಾಸ್ಥರು ಮತ್ತು ಇತ್ಯಾದಿ ವರ್ಗಗಳವರಿಗೆ ಅನುಕೂಲವಾಗುತ್ತವೆ.

ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ನೌಕರರ ಬಗ್ಗೆ

583. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ನೌಕರರು ಹಣದ ದುರುಪಯೋಗ ಪಡಿಸಿಕೊಂಡದ್ದಕ್ಕೆ ಸಿ.ಓ.ಡಿ. ಯಿಂದ ತನಿಖೆ ಮಾಡಿಸಲು ಸರ್ಕಾರ ಆದೇಶ ಹೊರಡಿಸಿದೆಯೆ?

2) ಹಾಗಿದ್ದಲ್ಲಿ, ಎಷ್ಟು ಹಣ ದುರುಪಯೋಗವಾಗಿದೆ?

3) ಸಿ.ಓ.ಡಿ. ವರದಿ ಬಂದಿದೆಯೆ?

4) ಹಾಗಿದ್ದಲ್ಲಿ, ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

1) ಆಕ್ರಮಗಳು, ದುರ್ವ್ಯವಹಾರಗಳು ಮತ್ತು ದುರುಪಯೋಗದ ಅಪಾದನೆಗಳನ್ನು ಸಿ.ಓ.ಡಿ. ತನಿಖೆಗಾಗಿ ಒಪ್ಪಿಸಲಾಗಿತ್ತು.

2) ಸಿ.ಓ.ಡಿ. ತನ್ನ ತನಿಖಾ ವರದಿಯಲ್ಲಿ ಕೆಲವು ಆಕ್ರಮಗಳು ಹಾಗೂ ಆಡಳಿತಾತ್ಮಕ ನ್ಯೂನತೆಗಳನ್ನು ಗುರುತಿಸಿದೆ.

3) ಹೌದು

4) ಪರಿಶೀಲಿಸಲಾಗುತ್ತಿದೆ.